**<u>ದಿನಾಂಕಃ 17.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ. ಪಿ ಎಲ್ ಎನ್ ವಕೀಲರಿಂದಃ-</u>**

1. ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಅಸಲು ದಾವಾ ಸಂಖ್ಯೆ.137/2004 ರ ದಾವೆಯ ಡಿಕ್ರಿ ನನಗೆ ಬಂಧನಕಾರಿ ಆಗುವುದಿಲ್ಲ ಎಂದು ವಾದಿ ಶಿವರಾಜೇಗೌಡ ನಮ್ಮ ವಿರುದ್ದ ಈ ಪ್ರಸ್ತುತ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ವಾದಿ ಶಿವರಾಜೇಗೌಡ ಪ್ರಸ್ತುತ ದಾವೆಯನ್ನು 2009ರಲ್ಲಿ ನಮ್ಮ ವಿರುದ್ದ ದಾಖಲು ಮಾಡಿದ್ದು ನಿಪಿ-9ರಂತೆ ಸದರಿ ಈ ದಾವೆಯ ಸಮನ್ಸ್ ದಿನಾಂಕ 17.07.2009 ರಂದು ನನಗೆ ತಲುಪಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯು ವಾದಿಯ ಪರ ಡಿಕ್ರಿ ಆದ ನಂತರ ಸದರಿ ಡಿಕ್ರಿಯನ್ನು ಪ್ರಶ್ನಿಸಿ ಆರ್.ಎ.13/2012ಎಂದು ಇದೇ ರಾಮನಗರದ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಪೀಲು ಮಾಡಿದ್ದೇನೆ ಎಂದರೆ ಸರಿ. ಸದರಿ ಅಪೀಲು ದಿನಾಂಕ 18.08.2012ರಂದು ವಜಾ ಆಗಿರುತ್ತದೆ ಎಂದರೆ ಸರಿ.

2. ತಾವು ಅಸಲು ದಾವ ಸಂಖ್ಯೆ.137/2004 ಎಂದು ದಾವೆ ಸಲ್ಲಿಸುವಾಗ ವಿಳಾಸ ತಗಚಗೆರೆ ಎಂದು ಇತ್ತು ಎಂದರೆ ಸರಿಯಲ್ಲ. ದಾವಾ ಹೂಡುವ ಸಂದರ್ಭದಲ್ಲಿ ತಾವು ಮೈಸೂರು ಟೌನ್ ನಲ್ಲಿ ಇರುವ ಬಗ್ಗೆ ದಾಖಲೆ ಹಾಜರು ಮಾಡಿದ್ದೀರಾ ಎಂದರೇ ಸಾಕ್ಷಿ ಆಧಾರ್ ಕಾರ್ಡ್ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಆಧಾರ್ ಕಾರ್ಡ್ ನ್ನು ಇತ್ತೀಚೆಗೆ ಮಾಡಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ವಾದಿ ಶಿವರಾಜೇಗೌಡ ಖರೀದಿ ಮಾಡಿದ ಆಸ್ತಿಯನ್ನು ಹೊರತುಪಡಿಸಿ ಇನ್ನು 2 ಆಸ್ತಿಗಳನ್ನು ನನ್ನ ತಂದೆ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಅಸಲು ದಾವಾ ನಂ.137/2004 ರಲ್ಲಿ ನಮ್ಮ ಕುಟುಂಬದ ಎಲ್ಲಾ ಆಸ್ತಿಗಳನ್ನು ಕೂಡಿಸಿ ವಿಭಾಗ ಕೋರಿ ದಾವೆ ಹೂಡಿದ್ದೇವೆ ಎಂದರೆ ಸರಿ.

3. ಅಸಲು ದಾವ ಸಂಖ್ಯೆ.137/2004 ಮತ್ತು ಈ ಪ್ರಸ್ತುತ ದಾವೆ ಎರಡನ್ನು ಒಟ್ಟಿಗೆ ಕೂಡಿಸಿ ತೀರ್ಪು ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ತೀರ್ಪಿನ ದಾಖಲೆಗಳನ್ನು ನಾನೇ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂರದೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ವಾದಿ ಶಿವರಾಜೇಗೌಡ ಖರೀದಿ ಮಾಡಿರುವ ಕ್ರಯ ಪತ್ರವನ್ನು ತಾವು ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ತಂದೆ ತೀರಿಕೊಂಡ ನಂತರ ಸ ನಂ.129/1 ಮತ್ತು 132 ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಅಸಲು ದಾವಾ ನಂ.137/2004 ರ ದಾವೆಯಲ್ಲಿ ವಾದಿ ಶಿವರಾಜೇಗೌಡ ತನ್ನನ್ನು ಪಕ್ಷಗಾರನನ್ನಾಗಿ ಮಾಡುವಂತೆ ಅರ್ಜಿ ಮೂಲಕ ಪಕ್ಷಗಾರರಾಗಿ ಬಂದಿದ್ದರು ಎಂದರೆ ಸರಿ. ದಾವಾ ಆಸ್ತಿಯನ್ನು ನನ್ನ ತಂದೆ ಮತ್ತು ನನ್ನ ಸಹೋದರರು ಮಾರಾಟ ಮಾಡಿರುವ ವಿಷಯ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬೆಲೆ ಗಗನಕ್ಕೆ ಏರಿದ್ದು, ದಾವಾ ಆಸ್ತಿಯನ್ನು ವಾಪಸ್ಸು ಪಡೆಯುವ ದುರುದ್ದೇಶದಿಂದ ನಾನು ಮತ್ತು ನನ್ನ ಸಹೋದರ, ಸಹೋದರಿಯರ ಜೊತೆ ಸೇರಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಿಡಿ-1 10ನೇ ತರಗತಿಯ ಅಂಕಪಟ್ಟಿಯನ್ನು ಸೃಷ್ಟಿ ಮಾಡಿ ಕೇಸಿಗೆ ಅನುಕೂಲ ಆಗಲಿ ಎಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ಸೃಷ್ಟಿಪಡಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನನ್ನ ತಂದೆ ಮತ್ತು ಸಹೋದರರು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರರು ಇನ್ನಿತರೆ ಆಸ್ತಿಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ